# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 226 | Pages. 2 | Date: 18-08-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 226 - ಪುಟಗಳು : 2 | 18-08-2026 | ಮಂಗಳವಾರ | Ph: 8762954248 | ದರ : ₹1


# ಬಿಡದಿ ಹೋರಾಟ ರೈತಪರ: ಅಸೂಯೆ ಅಲ್ಲ

## ನೈಸ್ ಕಂಪನಿ ವಿಚಾರದಲ್ಲಿ ಸಿಎಂ ವಿರುದ್ಧ ಗಂಭೀರ ಆರೋಪ ಮಾಡಿದ ಕೇಂದ್ರ ಸಚಿವ ಕುಮಾರಸ್ವಾಮಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಬಿಡದಿ ಟೌನ್ ಶಿಪ್ ವಿರೋಧಿಸಿ ನಾವು ನಡೆಸುತ್ತಿರುವ ಹೋರಾಟ, ರಾಜಕೀಯ ಅಥವಾ ಸರ್ಕಾರದ ಮೇಲಿನ ಅಸೂಯೆಯಿಂದಲ್ಲ ಬದಲಾಗಿ ರೈತರ ಪರ ಮಾತ್ರವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಪಟ್ಟಣದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಜಾಹೀರಾತು ಮೂಲಕ ಏನು ಮಾಹಿತಿ ಕೊಡ್ತಾರೆ ಕೊಡಲಿ.ಇನ್ನೂ ಹತ್ತು ಪೇಜ್ ಕೊಟ್ಟಿಕೊಳ್ಳಲಿ. ಜನ, ರೈತರು, ರೈತ ಮಹಿಳೆಯರು ಭೂಮಿ ಕೊಡಲ್ಲ ಅಂತಾರೆ ಆದರೂ ಏಕೆ ದಬ್ಬಾಳಿಕೆ ಮಾಡಿ, ಕೆಲ ರೌಡಿಗಳನ್ನ ಬಿಟ್ಟು ಹೆದರಿಸಿ, ನೀವು ಭೂಮಿ ಕೊಡದೆ ಹೋದರೆ ಗ್ರಾಂಟ್ ಭೂಮಿ ವಾಪಸ್ ತಗೋತಿವಿ ಅಂತ ದಬ್ಬಾಳಿಕೆ ಮಾಡಿ ಏನು ಸಾಧನೆ ಮಾಡೋಕೆ ಹೊರಟಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದರು.

ಸರ್ಕಾರ ಬೇರೆ ಕಡೆ ಪ್ರಾಜೆಕ್ಟ್ ಮಾಡಬಹುದು. ಆದರೆ ಹಠಕ್ಕೆ ಬಿದ್ದಿದೆ. ಯೋಜನೆ ವಿರುದ್ಧ ನಮ್ಮ ತೀರ್ಮಾನ ಹಾಗೂ ಅವರದೇ ಪಕ್ಷದ ಸತ್ಯ ಶೋಧನಾ ಸಮಿತಿ ವರದಿ ಬಗ್ಗೆಯೂ ಜಾಹೀರಾತು ನೀಡಿದರೆ ಅಭಿನಂದನೆ ಸಲ್ಲಿಸುವೆ ಎಂದು ಕುಟುಕಿದರು.

ಬಿಡದಿ ಹೋರಾಟದಲ್ಲಿ ಏನು ಬೇಕಾದರೂ ಟೀಕೆ ಮಾಡಲಿ, ಸಂಶಯ ವ್ಯಕ್ತಪಡಿಸಲಿ, 500 ದಿನಗಳಿಂದ ಭೂಮಿ ಕೊಡಲ್ಲ ಎಂದು ರೈತರು ಪ್ರತಿಭಟನೆ ಮಾಡುತ್ತಿದ್ದಾರೆ, ರೈತರ ಕೋರಿಕೆ ಮೇರೆಗೆ ನಾನು ದನಿ ಎತ್ತಿದ್ದೇನೆ ಎಂದರು.

ಇದರಲ್ಲಿ ಯಾವುದೇ ರಾಜಕೀಯ, ಅಸೂಯೆಯಿಂದ ಮಾಡುತ್ತಿದ್ದೀವಿ ಎನ್ನುವ ಪ್ರಶ್ನೆಯೇ ಇಲ್ಲ ಎಂದರು. ರಾಜ್ಯಪಾಲರೂ ಸಹ ಪತ್ರ ಬರೆದು ಸಲಹೆ ಕೊಟ್ಟಿದ್ದಾರೆ, ನೈಸ್ ಕಂಪನಿ ಬಿಎಂಐಸಿ ಪ್ರಾಜೆಕ್ಟ್ ಹೆಸರಿನಲ್ಲಿ ಲೂಟಿ ಮಾಡಿದ್ದಾರೆ, ರೈತರಿಗೆ ಪರಿಹಾರ ಕೊಟ್ಟಿಲ್ಲ, ನೈಸ್ ಯೋಜನೆಗೆ ಹೆಚ್ಚುವರಿ ಭೂಮಿ ಕೊಟ್ಟಿರುವುದನ್ನು ವಾಪಸ್ ಪಡೆದು ಅಲ್ಲಿ ಬೇಕಾದರೆ ಟೌನ್‌ಶಿಪ್ ಮಾಡಿ ಎಂದು ಸಲಹೆ ಕೊಟ್ಟಿದ್ದಾರೆ, ಬ್ರಾಂಡ್ ಬೆಂಗಳೂರು ಮಾಡಲು ಹೋಗಿ ಲೂಟಿ ಹೊಡೆಯುವುದು ಬೇಡ ಎಂದರು.

ನೈಸ್ ಕಂಪನಿ ವಿಚಾರದಲ್ಲಿ ನ್ಯಾಯಾಲಯದ ತೀರ್ಪು ಉಲ್ಲೇಖಿಸಿ ನಾನು ಸಿಎಂಗೆ ಪತ್ರ ಬರೆದಿದ್ದೇನೆ. ಆರಂಭದಿಂದ ಇಲ್ಲಿಯವರೆಗೆ ಕಂಪನಿ ಹಲವು ಮಾರ್ಪಾಡು ಮಾಡಿಕೊಂಡು, ಮನಬಂದಂತೆ ನಿಯಮ ಮಾಡಿಕೊಂಡಿದೆ.



ನೈಸ್ ವಿರುದ್ಧ ಜೆಡಿಎಸ್ ಪ್ರತಿಭಟನೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ನೈಸ್ ವಿರುದ್ಧವಾಗಿ ನಾನು ಸಾಕಷ್ಟು ಹೋರಾಟ ಮಾಡಿದ್ದೇನೆ, ನನ್ನ ಮೊಮ್ಮಗ ನಿಖಿಲ್ ನಾಳೆ ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆಗೆ ಕರೆ ಕೊಟ್ಟಿದ್ದಾರೆ, ಆ ಪ್ರತಿಭಟನೆಯಲ್ಲಿ ನಾನೂ ಭಾಗಿಯಾಗುತ್ತೇನೆ ಎಂದರು.

ಈ ಬಗ್ಗೆ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ. ಬಾಗಲಕೋಟೆಯಲ್ಲಿ ಸುದೀರ್ಘವಾಗಿ ಮಾತನಾಡಿದ್ದಾರೆ,

ನಡೆದಿರುವ ಅಕ್ರಮದ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸಿದ್ದಾರೆ. ನಾಳೆ ಇದರ ಬಗ್ಗೆ ಕೆಲ ವಿಚಾರ ಮಾತನಾಡುತ್ತೇನೆ ಎಂದರು.

ದೇಶದ ಇತಿಹಾಸದಲ್ಲೇ ಮೊದಲು ಸರ್ಕಾರವನ್ನೇ ಒಂದು ಸಂಸ್ಥೆ ದಾರಿ ತಪ್ಪಿಸಿದೆ, ಸರ್ಕಾರದ ಜೊತೆ ಅಧಿಕಾರಿಗಳನ್ನು ಕೂಡ ದುರ್ಬಳಕೆ ಮಾಡಿಕೊಂಡಿದೆ, ನ್ಯಾಯಾಲಯಕ್ಕೆ ತಪ್ಪು ದಾಖಲೆ ಸಂಸ್ಥೆ ನೀಡಿದೆ, ನಕಲಿ ದಾಖಲೆ ನೀಡಿ ನೂರಾರು ಪ್ರಕರಣಗಳಲ್ಲಿ ಪರವಾಗಿ ತೀರ್ಪು ಪಡೆದಿದ್ದಾರೆ. ದೇಶದ ಇತಿಹಾಸದಲ್ಲಿ ಇಷ್ಟೊಂದು ನ್ಯಾಯಾಲಯದ ಪ್ರಕರಣ ಎದುರಿಸಿರುವ ಸಂಸ್ಥೆ ಇಲ್ಲ ಎಂದು ಕಿಡಿ ಕಾರಿದರು.

ಆ ವ್ಯಕ್ತಿ ಮತ್ತು ಕಂಪನಿ 30 ವರ್ಷ ಸಂಪೂರ್ಣಗೊಳಿಸಿದ್ದರೂ, 111 ಕಿಮೀ ಕಾಮಗಾರಿ ಮುಗಿಸಿಲ್ಲ. ಅವರು ಸಂಸ್ಥೆ ಶುರು ಮಾಡಿದ್ದು ರಸ್ತೆ ಮಾಡೋದಕ್ಕಲ್ಲ, ಬದಲಾಗಿ ಬೆಲೆ ಬಾಳುವ ಭೂಮಿ ಕಬಳಿಸುವುದಕ್ಕೆ ಎಂದು ದೂರಿದ ಹೆಚ್ಡಿಕೆ, ನನಗೆ ಒಂದು ಮಾಹಿತಿ ಲಭ್ಯವಾಗಿದೆ. ಆ ಯೋಜನೆಯಿಂದ, ಆ ಕಂಪನಿಯಿಂದ ಯಾರು ಈಗ ಟೇಕ್ ಓವರ್ ಮಾಡೋದಕ್ಕೆ ಹೊರಟಿದ್ದಾರೆ ಎಂಬುದನ್ನು ಮುಖ್ಯಮಂತ್ರಿಗಳಿಗೆ ಕೇಳೋದಕ್ಕೆ ಬಯಸುತ್ತೇನೆ ಎನ್ನುವ ಮೂಲಕ ಪರೋಕ್ಷವಾಗಿ ಸಿಎಂ ವಿರುದ್ಧವೇ ಗಂಭೀರ ಆರೋಪ ಮಾಡಿದರು.

### ಹನೂರಿನಲ್ಲಿ ಮೂವರ ಶೂಟೌಟ್ ಪ್ರಕರಣದ ಬಗ್ಗೆ

ಸರ್ಕಾರದಿಂದ ಬುಲೆಟಿನ್ ಬಿಟ್ಟಿದ್ದಾರೆ, ಅಲ್ಲಿಯ ರೈತರು, ಕುಟುಂಬಗಳು ಅವರ ನೋವು ವ್ಯಕ್ತಪಡಿಸಿದ್ದಾರೆ, ಒಂದೇ ಕುಟುಂಬದ ಮೂವರ ಸಾವಾಗಿರುವುದಕ್ಕೆ ಆಕ್ರೋಶ ಇದೆ.

ಸರ್ಕಾರ, ಉತ್ತಮ ಬದುಕಿಗೆ ದಾರಿ ಮಾಡಿದಾಗ ಇಂತಹ ಘಟನೆಗಳು ಆಗಲ್ಲ, ಇದನ್ನ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಸತ್ತವರು ಜಿಂಕೆ ಬೇಟೆಗೆ ಹೋಗಿದ್ದವರು ಎಂದು ಸರ್ಕಾರ ದಿಂದ ಮಾಹಿತಿ ನೀಡಲಾಗಿದೆ. ಸಿಎಂ ತನಿಖೆ ಮಾಡಿಸುವುದಾಗಿ ಹೇಳಿದ್ದಾರೆ. ಆದರೆ ಅವರನ್ನು ಬಂಧಿಸಿ ದಂಡಿಸಬಹುದಿತ್ತು. ಕೊಂದಿರುವುದು ತಪ್ಪು ಎಂದು ಹೆಚ್ಡಿಕೆ ಹೇಳಿದರು.

ಇದರಲ್ಲಿ ಯಾರ ಪಾಲಿದೆ ಎಂದು ಹೇಳಲಿ, ಮಾಧ್ಯಮದ ಮುಂದೆ ವೇದಿಕೆಯಲ್ಲಿ ಭಾಷಣ ಮಾಡೋದು ಬೇರೆ, ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ ಮಾಡಿದ್ದೇನೆ ಎಂದು ಹೇಳಿದ್ದಾರೆ ಸಂತೋಷ, ಆದರೆ ಈಗಲೂ ಅಧಿಕಾರ ದುರುಪಯೋಗ ಪಡಿಸಿಕೊಂಡು ವೇದಿಕೆ ಮೇಲೆ ಹರಿಶ್ಚಂದ್ರನಾಗುತ್ತೇನೆ, ಸತ್ಯ ಹೇಳುತ್ತೇನೆ, ಪ್ರಾಮಾಣಿಕವಾಗಿ ರಾಜ್ಯ ಆಳುತ್ತೇನೆ ಅಂತಿದ್ದಾರಲ್ಲಾ, ಅವರ ಹುಟ್ಟುಗುಣ ಹೋಗೊಲ್ಲ ಎಂದು ಲೇವಡಿ ಮಾಡಿದರು.

ಇನ್ನೊಂದು ರೀತಿಯಲ್ಲಿ ಈ ಭೂಮಿ ಲೂಟಿ ಹೊಡೆಯಲಿಕ್ಕೆ ಹೋಗಬೇಡಿ ಅನ್ನೋದಕ್ಕೆ ಪತ್ರ ಬರೆದಿದ್ದೇನೆ. ಮುಖ್ಯಮಂತ್ರಿಗಳು ಎಲ್ಲಾ ಮುಖ್ಯಮಂತ್ರಿಗಳನ್ನು ನೆನಪಿಸಿ ಕೊಂಡು ಭಾಷಣ ಮಾಡಿದ್ದಾರೆ, ಅವರಿಗೆ ಗೌರವ ತರಬೇಕಾದರೆ ಮುಂದೆಯಾದರೂ ರಾಜ್ಯದ ಸಂಪತ್ತು ಉಳಿಸಿ, ನಿಮಗೆ ಅಧಿಕಾರ ಸಿಕ್ಕಿದೆ. ಅದನ್ನು ದುರುಪಯೋಗ ಮಾಡಿಕೊಳ್ಳದೆ ಉತ್ತಮ ಆಡಳಿತ ನೀಡಿ ಎಂದು ಸಲಹೆ ನೀಡಿದರು.

ಈ ಯೋಜನೆ ದೇಶದ, ಕರ್ನಾಟಕ ಇತಿಹಾಸದ ಒಂದು ಸ್ಕ್ಯಾಂಡಲ್ ಎಂದು ತೀರ್ಪಿನಲ್ಲಿ ಬರೆದಿದ್ದಾರೆ, ಅಕ್ರಮವಾಗಿ ಟೋಲ್ ಕಲೆಕ್ಟ್ ಆಗುತ್ತಿದೆ, 2 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಈ ಕಂಪನಿ ದುರ್ಬಳಕೆ ಮಾಡಿಕೊಂಡು ಸಂಗ್ರಹಿಸಿದ್ದಾರೆ, ಆದರೂ ತೀರ್ಪು ಬಂದು 20 ದಿನ ಆಗಿದ್ದರೂ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರು. ಟೇಕ್ ಓವರ್ ಮಾಡುವ ಚರ್ಚೆಗಳನ್ನು ಸ್ವಲ್ಪ ದಿನ ನಿಲ್ಲಿಸಿಕೊಳ್ಳಿ, ಅದು ಸರ್ಕಾರಕ್ಕೋ, ಸರ್ಕಾರದ ಮುಖ್ಯಸ್ಥರಾಗಿ ಮುಖ್ಯಮಂತ್ರಿಗಳೇ ಟೇಕ್ ಓವರ್ ಮಾಡಿಕೊಳ್ತಿರೋ ಎಂದು ಪ್ರಶ್ನಿಸಿದರು. ನಿಮ್ಮ ಕಂಪನಿಗೆ ಕೆಲವರನ್ನು ಇಟ್ಟುಕೊಂಡಿದ್ದೀರಲ್ಲಾ, ಇದೆಲ್ಲಾ ನಡೆಯುತ್ತಿರುವುದು ನನಗೂ ಗೊತ್ತಿದೆ ಎಂದು ಬಾಂಬ್ ಸಿಡಿಸಿದರು.

ಸೋನಿಯಾ ಗಾಂಧಿ ಅವರಿಂದ ವಂದೇ ಮಾತರಂ ಗೀತೆಗೆ ಅವಮಾನ ವಿಚಾರವಾಗಿ ಕೇಳಿದ ಪ್ರಶ್ನೆಗೆ, ಸರ್ಕಾರಿ ಕಾರ್ಯಕ್ರಮದಲ್ಲಿ ವಂದೇ ಮಾತರಂಗೆ ಗೌರವ ಕೊಡಬೇಕು ಎಂದು ಕೇಂದ್ರ ಕಾನೂನು ಮಾಡಿದೆ. ಇದನ್ನು ಗೌರವಿಸಬೇಕಿರುವುದು ಎಲ್ಲರ ಅಭಿಪ್ರಾಯ, ಎಲ್ಲಾ ಪಕ್ಷಗಳು ಗೌರವಿಸಬೇಕಿರುವುದು ಕರ್ತವ್ಯ, ಕಾಂಗ್ರೆಸ್ ನಾಯಕರು ಇದರಲ್ಲೂ ಸಣ್ಣತನ ತೋರಿಸುವ ಅಗತ್ಯ ಇಲ್ಲ, ಹಿಂದೆ ಮಹಾತ್ಮಗಾಂಧಿಯವರು ಭಾಗಿಯಾಗಿದ್ದ ಕಾರ್ಯಕ್ರಮದಲ್ಲೇ ಮೊದಲ ಬಾರಿಗೆ ಈ ಗೀತೆ ಅಳವಡಿಸಿಕೊಳ್ಳಲಾಗಿತ್ತು. ಈಗಿನ

ಕಾಂಗ್ರೆಸ್ ನಾಯಕರು ಸಣ್ಣ ತನದಿಂದ ನಡೆದುಕೊಳ್ಳಬಾರದು ಎಂದರು. ಸೋನಿಯಾಗಾಂಧಿ ಅವರಿಂದ ಏನೂ ನಿರೀಕ್ಷೆ ಮಾಡಲು ಸಾಧ್ಯ, ಅವರೇನೂ ನಮ್ಮ ದೇಶದವರಾ, ಅವರ ರಕ್ತ ಹೆಚ್ಚು ಕಡಿಮೆ ಇಟಲಿ ರಕ್ತವೇ ಅಲ್ಲವೇ ಎಂದು ಮಾರ್ಮಿಕವಾಗಿ ನುಡಿದರು. ಈಗ ಏನೇ ಸಬೂಬು ಹೇಳಿದರೂ, ಸತ್ಯಾ ಸತ್ಯತೆ ಏನೆಂದು ಜನ ನೋಡ್ತಾರೆ, ಸುಳ್ಳು ಹೇಳಿ ತಪ್ಪಿಸಿಕೊಳ್ಳೋದು ಅಷ್ಟು ಸುಲಭ ಅಲ್ಲ ಎಂದು ಎಚ್ಚರಿಸಿದರು.

# ಚೆನ್ನಮ್ಮ ಅವರ ತಿಂಗಳ ಆರಾಧನೆ-ಸ್ಮರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪತ್ನಿ ದಿ.ಚನ್ನಮ್ಮ ಅವರ ತಿಂಗಳ ಆರಾಧನಾ ಕಾರ್ಯಕ್ರಮವಾದ ಇಂದು ಕುಟುಂಬದ ಎಲ್ಲ ಸದಸ್ಯರು ಹರದನಹಳ್ಳಿಗೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಆರಾಧನಾ ಕಾರ್ಯಕ್ಕೂ ಮುನ್ನ ದೇವೇಗೌಡರೂ ಸೇರಿದಂತೆ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಪಟ್ಟಣದ ನೀಲಕಂಠೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು.

ದೇವೇಗೌರಿಗೆ ಪುತ್ರರಾದ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ, ರೇವಣ್ಣ ಸಾಥ್ ನೀಡಿದರು. ನೀಲಕಂಠೇಶ್ವರನಿಗೆ ರುದ್ರಾಭಿಷೇಕ ಮಾಡಿಸಿದರು.

ಪೂಜೆ ನಂತರ ಹರದನಹಳ್ಳಿಯ ಮಾವಿನಕೆರೆ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಚೆನ್ನಮ್ಮ ಸಮಾಧಿಗೆ ಪೂಜೆ ಸಲ್ಲಿಸಿದರು.

# ಸ್ವಾತಂತ್ರ್ಯ ದಿನಾಚರಣೆಯ ಪಥ ಸಂಚಲನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಈಚೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಪಥ ಸಂಚಲನದಲ್ಲಿ ನಗರದ ಟೈಮ್ಸ್ ಗುರುಕುಲ (ಸಿ.ಬಿ.ಎಸ್.ಸಿ) ಶಾಲೆಯ ವಿದ್ಯಾರ್ಥಿಗಳು ಪಥ ಸಂಚಲನದಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ.

ಇದೇ ವೇಳೆ ಮಾತನಾಡಿದ ಟೈಮ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಟೈಮ್ಸ್ ಗಂಗಾಧರ್ ಮಾತನಾಡಿ, ಜಿಲ್ಲಾ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಟೈಮ್ಸ್ ಗುರುಕುಲ ಶಾಲೆಯ ಮಕ್ಕಳು ನಿರಂತರವಾಗಿ ಕಳೆದ 13 ವರ್ಷಗಳಿಂದ ಪ್ರಥಮ ಬಹುಮಾನ ಪಡೆಯುತ್ತಿರುವುದು ಹೆಮ್ಮೆ ಇದೆ. ನಮ್ಮ ಶಾಲೆಯ ಮಕ್ಕಳು ಶಿಸ್ತಿನಿಂದ ಪಥ ಸಂಚಲನದಲ್ಲಿ ಭಾಗವಹಿಸುತ್ತಿರುವುದು, ಅವರಿಗೆ ಕಳೆದ ಹಲವು ವರ್ಷಗಳಿಂದ ಮಾರ್ಗದರ್ಶನ ಮಾಡಿಕೊಂಡು ಬರುತ್ತಿರುವ ದೈಹಿಕ ಶಿಕ್ಷಕರ ಜವಬ್ದಾರಿ ಬಹುಮಾನ ಪಡೆಯಲು ಸಾಧ್ಯವಾಗಿದೆ ಎಂದರು.

# 29ರಿಂದ ಆರಾಧನಾ ಮಹೋತ್ಸವ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಉತ್ತರ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಮಂತ್ರಾಲಯ ಶಾಖೆಯಲ್ಲಿ ಶ್ರೀ ಗುರು ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 355ನೇ ಆರಾಧನಾ ಮಹೋತ್ಸವವನ್ನು ಆ.29 ರಿಂದ 31 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಭಕ್ತಿಭಾವದಿಂದ ಆಚರಿಸಲಾಗುವುದು ಎಂದು ಮಠದ ಎಂ.ಕೆ. ಪ್ರಕಾಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಮಂತ್ರಾಲಯದ ಧಾರ್ಮಿಕ ಪರಂಪರೆಯಂತೆ ಹಾಗೂ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ 1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆಜ್ಞೆ, ಉಪದೇಶ ಮತ್ತು ಕೃಪಾಶೀರ್ವಾದದೊಂದಿಗೆ ಆರಾಧನಾ ಮಹೋತ್ಸವ ಆಯೋಜಿಸಲಾಗಿದೆ ಎಂದರು.

ಆರಾಧನಾ ಮಹೋತ್ಸವಕ್ಕೆ ಮುನ್ನ ಆ.28 ರಂದು ಬೆಳಿಗ್ಗೆ 6 ಗಂಟೆಗೆ ಧ್ವಜಾರೋಹಣದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದೆ. ಗೋಪೂಜೆ, ಪ್ರಾರ್ಥನಾಪೂಜೆ, ಕಂಕಣ ಬಂಧನ, ಫಲ-ತಾಂಬೂಲ ಪ್ರಸಾದ ವಿನಿಯೋಗ ಹಾಗೂ ಮಹಾ ಮಂಗಳಾರತಿ ನಡೆಯಲಿದೆ.

ಕೃಷ್ಣ ದ್ವಿತೀಯದಂದು ಮಧ್ಯಾರಾಧನೆ ನೆರವೇರಲಿದೆ. ಮಧ್ಯಾರಾಧನೆಯ ದಿನವನ್ನು ಪ್ರಮುಖ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಮಧ್ಯಾಹ್ನ 12 ಗಂಟೆಯಿಂದ ಭಕ್ತರಿಗೆ ನಿರಂತರ ಮಹಾ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಅನ್ನಪೂರ್ಣೇಶ್ವರಿ ಪ್ರಸಾದ ವಿನಿಯೋಗದ ಮೂಲಕ ಸಾವಿರಾರು ಭಕ್ತರಿಗೆ ಪ್ರಸಾದ ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಆ.31ರಂದು ಶ್ರಾವಣ ಕೃಷ್ಣ ತೃತೀಯಿಯಂದು ಉತ್ತರಾರಾಧನೆ ಹಾಗೂ ಮಹಾ ರಥೋತ್ಸವ ನಡೆಯಲಿದೆ. ಮೂರು ದಿನಗಳ ಕಾಲ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಅನುಗ್ರಹ ಪಡೆಯುವಂತೆ ಮಠದ ವತಿಯಿಂದ ಮನವಿ ಮಾಡಲಾಗಿದೆ.

ಆರಾಧನಾ ಮಹೋತ್ಸವದ ಹಿನ್ನೆಲೆಯಲ್ಲಿ ಮಠಕ್ಕೆ ಆಗಮಿಸುವ ಭಕ್ತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ. ಪೂಜೆ, ದರ್ಶನ ಹಾಗೂ ಅನ್ನಸಂತರ್ಪಣೆಯಲ್ಲಿ ಭಕ್ತರು ಶಿಸ್ತಿನಿಂದ ಭಾಗವಹಿಸುವಂತೆ ಮನವಿ ಮಾಡಿದರು. ಕುಟುಂಬ ಸಮೇತರಾಗಿ ಆಗಮಿಸಿ ಶ್ರೀ ರಾಘವೇಂದ್ರ ಸ್ವಾಮಿಗಳವರ ದರ್ಶನ ಪಡೆದು ತೀರ್ಥ-ಪ್ರಸಾದ ಸ್ವೀಕರಿಸುವಂತೆ ಮನವಿ ಮಾಡಿದರು.

ಮಠದ ವ್ಯವಸ್ಥಾಪಕ ಗುರುರಾಜ ಆಚಾರ್ಯ, ವೈಶಾಖ್, ರಂಜಿತ್ ಗೊರೂರು, ಬಿ.ಜಿ. ಪ್ರಸಾದ್, ಹರೀಶ್ ಸುದ್ದಿಗೋಷ್ಠಿಯಲ್ಲಿದ್ದರು.

# ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪದವಿ ಹಂತದಲ್ಲಿ ವಿದ್ಯಾರ್ಥಿಗಳು ಆಧುನಿಕತೆ, ವೈಚಾರಿಕತೆ, ವೈಜ್ಞಾನಿಕತೆ ಹಾಗೆಯೇ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಬೇಕಾಗುವ ಉತ್ತಮ ಗುಣಗಳನ್ನು ಕಲಿತರೆ ಜೀವನದಲ್ಲಿ ಉತ್ತಮ ವ್ಯಕ್ತಿಗಳಾಗಬಹುದು ಎಂದು ಗಂಧದ ಕೋಠಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಅಭಿಪ್ರಾಯಪಟ್ಟರು.

ನಗರದ ಆರ್.ಸಿ. ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿ.ಬಿ.ಎ. ಹಾಗೂ ಬಿ.ಸಿ.ಎ. ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಅಭಿವಿನ್ಯಾಸ (ಹೊಸ ದಿಗಂತ) ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಉನ್ನತ ಶಿಕ್ಷಣ ಇಲಾಖೆಯು ಹೊಸದಾಗಿ ಪದವಿ ವ್ಯಾಸಂಗಕ್ಕಾಗಿ ಸೇರಿರುವ ಮಕ್ಕಳಿಗೆ ಹೊಸ ದಿಗಂತ ಎಂಬ ನೂತನ ಕಾರ್ಯಕ್ರಮ ಜಾರಿಗೆ ತಂದಿದ್ದು, ವಿವಿಧ ವಿಷಯಗಳ ಕುರಿತು ಅಧ್ಯಾಪಕರುಗಳು ಮಕ್ಕಳಿಗೆ ಉಪನ್ಯಾಸ ನೀಡುವರು. ಅಭಿವಿನ್ಯಾಸದ ಜೊತೆ ಜೊತೆಗೆ ಇನ್ನಿತರ ಪೂರಕ ಮಾಹಿತಿಗಳನ್ನು ಈ ಸಂದರ್ಭದಲ್ಲಿ ನೀಡಲಾಗುವುದು. ವಿದ್ಯಾರ್ಥಿನಿಯರು ನಿಂತನೀರಾಗಬಾರದು, ಸದಾ ಹರಿಯುವ ನದಿಯಂತೆ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸದೆ ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ಪಡೆಯಬೇಕು. ಕುವೆಂಪು ಅವರ ನಾನುಡಿಯಾದ ಓ ನನ್ನ ಚೇತನ ಆಗು ನೀ ಅನಿಕೇತನ ಎಂಬುವುದರ ಅರ್ಥವನ್ನು ಮಕ್ಕಳು ಅರಿಯಬೇಕು. ಸರ್ಕಾರ ಪದವಿ ಕಾಲೇಜುಗಳಿಗೆ ಹಲವು ಸೌಲಭ್ಯಗಳನ್ನು ಒದಗಿಸುತ್ತಿದ್ದು, ಇದನ್ನು ವಿದ್ಯಾರ್ಥಿನಿಯರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಪಠ್ಯದ ವಿಷಯಗಳ ಜೊತೆ ಜೊತೆಗೆ ವೈಚಾರಿಕತೆ, ವೈಜ್ಞಾನಿಕತೆ, ತಾಂತ್ರಿಕ, ಹೊಸತನ ಇದೆಲ್ಲಾವುದನ್ನು ಕಲಿಯಬೇಕು. ಎಲ್ಲ ಶಿಕ್ಷಕರಿಗೂ ಅವರದೆ ಆದ ಗುಣ ವಿಶೇಷ ಇದೆ ಹಾಗಾಗಿ ಎಲ್ಲ ಶಿಕ್ಷಕರಿಗೂ ಗೌರವ ಸಲ್ಲಸುವುದನ್ನು ವಿದ್ಯಾರ್ಥಿಗಳು ಮಾಡಬೇಕು. ತಾವು ಆಯ್ಕೆ ಮಾಡಿಕೊಂಡ ವಿಷಯಗಳ ಬಗ್ಗೆ ಅಪಾರ ಜ್ಞಾನವನ್ನು ಸಂಪಾದನೆ ಮಾಡುವುದರ ಮೂಲಕ ಪದವಿ ಮುಗಿಸಿದ ನಂತರ ಪಡೆದುಕೊಂಡ ಜ್ಞಾನವನ್ನು ಬಳಕೆ ಮಾಡಿಕೊಳ್ಳಬೇಕು. ಪಠ್ಯದೊಂದಿಗೆ ಕಾಲೇಜು ಹಂತದಲ್ಲಿ ನಡೆಯುವ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಸಕ್ರೀಯವಾಗಿ ಭಾಗವಹಿಸಿ ಆ ಕ್ಷೇತ್ರದಲ್ಲೂ ಸಾಧನೆ ಮಾಡಬೇಕು. ವಿದ್ಯಾರ್ಥಿ ಜೀವನದಲ್ಲಿ ಮಾನಸಿಕ ಮತ್ತು ದೈಹಿಕ ಆರೋಗ್ಯ ಬಹಳ ಮುಖ್ಯ ಹಾಗಾಗಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿiiವಾಗಿ ತೊಡಗಬೇಕು. ಹಾಗೆಯೇ ಕಾಲೇಜುಗಳಲ್ಲಿ ನಡೆಯುವ ಪ್ರತಿಯೊಂದು ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿ ಜ್ಞಾನ ಸಂಪಾದನೆ ಮಾಡಬೇಕು ಎಂದರು.

ಅಭಿವಿನ್ಯಾಸ (ಹೊಸ ದಿಗಂತ) ಕಾರ್ಯಕ್ರಮದ ಸಂಯೋಜಕರಾದ ಡಾ. ಸುನೀತ ಜಿ, ಡಾ. ಕಾಂತೇಶ್, ಅಧ್ಯಾಪಕರಾದ ಜಿ.ಆರ್. ಮೋಹನ್ ಕುಮಾರ್, ಡಾ. ಶಿವಕುಮಾರ್ ಸಿ.ಎಲ್., ಸುರೇಶ್ ಕುಮಾರ್, ನಂದನ್ ಪಿ., ಡಾ. ಸುರೇಶ್ ಕುಮಾರ್ ಕೆ.ಆರ್., ಗ್ರಂಥಪಾಲಕ ಡಾ. ಮರಿರಾಜ್ ಸೇಡಂ ಹಾಗೂ ಇತರರು ಹಾಜರಿದ್ದರು.

# ತಾಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ

ಆಲೂರು: ಸಹಸ್ರಾರು ದೇಶಭಕ್ತರ ನಿರಂತರ ಹೋರಾಟ, ತ್ಯಾಗ ಹಾಗೂ ಬಲಿದಾನಗಳ ಫಲವಾಗಿ ನಮಗೆ ಸ್ವಾತಂತ್ರ್ಯ ಲಭಿಸಿದೆ. ಸುಮಾರು ಮೂರೂವರೆ ಶತಮಾನಗಳ ಕಾಲ ಬ್ರಿಟಿಷರ ದಾಸ್ಯದಲ್ಲಿದ್ದ ದೇಶವನ್ನು ಮುಕ್ತಗೊಳಿಸಲು ನೂರಾರು ಮಹನೀಯರು ತಮ್ಮ ಪ್ರಾಣವನ್ನೇ ಅರ್ಪಿಸಿದ್ದಾರೆ ಎಂದು ಕವಯಿತ್ರಿ ಸಿ.ಎನ್. ನೀಲಾವತಿ ಅಭಿಪ್ರಾಯಪಟ್ಟರು.

ತಾಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.




ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭಭಾಯಿ ಪಟೇಲ್, ಬಾಲಗಂಗಾಧರ ತಿಲಕ್, ಭಗತ್ ಸಿಂಗ್, ಲಾಲಾ ಲಜಪತ್ ರಾಯ್, ಬಿಪಿನ್ ಚಂದ್ರ ಪಾಲ್, ಮಂಗಲ್ ಪಾಂಡೆ ಸೇರಿದಂತೆ ಅಸಂಖ್ಯಾತ ನಾಯಕರ ಹೋರಾಟದ ಫಲವಾಗಿ 1947ರ ಆಗಸ್ಟ್ 15ರಂದು ದೇಶಕ್ಕೆ ಸ್ವಾತಂತ್ರ್ಯ ಬಂದಿತು ಎಂದರು.

ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಟಿ.ಬಿ. ರಾಜಶೇಖರ್ ಮಾತನಾಡಿ, ಯುವಜನತೆಯ ಕಣ್ಮಣಿ ಭಗತ್ ಸಿಂಗ್ ಹಾಗೂ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಧೈರ್ಯ, ಶೌರ್ಯ ಮತ್ತು ತ್ಯಾಗದ ಆದರ್ಶಗಳು ಇಂದಿನ ವಿದ್ಯಾರ್ಥಿಗಳಿಗೆ ಸದಾ ದಾರಿದೀಪವಾಗಿವೆ ಎಂದು ತಿಳಿಸಿದರು.

ಈ ಸಮಾರಂಭದಲ್ಲಿ ಶಾಲಾ ಮುಖ್ಯ ಶಿಕ್ಷಕ ಕೊಟ್ರೇಶ್ ಎಸ್. ಉಪ್ಪಾರ್, ಸಹ ಶಿಕ್ಷಕರಾದ ವಿ. ರವಿತ, ಎ.ಎಸ್. ರೇಖಾ, ಶಾಲಾ ಅಭಿವೃದ್ಧಿ ಸಮಿತಿಯ ಮಾಜಿ ಅಧ್ಯಕ್ಷರಾದ ಟಿ.ಇ. ಧರ್ಮ, ಚಿದಾನಂದ, ಬೆಂಗಳೂರಿನ ಭಗತ್ ಸಿಂಗ್ ಸಂಘದ ಅಧ್ಯಕ್ಷ ಸಂಪತ್, ಗ್ರಾಮಸ್ಥರಾದ ರಾಜಯ್ಯ, ಪೋಷಕರಾದ ಆಶಾ ವೆಂಕಟೇಶ್, ನೀಲಮ್ಮ, ಆಶಾ ಅಶೋಕ್, ಅಕ್ಷರ ದಾಸೋಹ ಸಿಬ್ಬಂದಿ ಚಂದ್ರಮ್ಮ ಸೇರಿದಂತೆ ಹಳೆಯ ವಿದ್ಯಾರ್ಥಿಗಳು ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ಹೋರಾಡುವ ಸಂಕಲ್ಪ ಬಿಡಲ್ಲ: ಲಿಂಗೇಶ್ ಸಂಕಲ್ಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ರೈತರ ಪರವಾಗಿ ತಾವು ಕೈಗೊಂಡಿರುವ ಹೋರಾಟವನ್ನು ಯಾವುದೇ ಕಷ್ಟ, ಸಂಕಷ್ಟ ಎದುರಾದರೂ ಮುಂದುವರಿಸುವುದಾಗಿ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಸಂಕಲ್ಪ ಮಾಡಿದರು.

ಜೈಲಿನಿಂದ ಬಿಡುಗಡೆಯಾಗಿ ಬಂದಾಗ ತಮ್ಮನ್ನು ಸ್ವಾಗತಿಸಿ, ಬೆಂಬಲ ನೀಡಿ ಆತ್ಮಸ್ಥೈರ್ಯ ತುಂಬಿದ ರೈತ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ರಾಜಕೀಯ ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು, ದಲಿತ ಮತ್ತು ಕನ್ನಡಪರ ಹೋರಾಟ ಗಾರರು ಸೇರಿದಂತೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದ ಅವರು, ಜೈಲು ವಾಸದ ಅನುಭವ ಮಾನಸಿಕವಾಗಿ ತೀವ್ರ ನೋವುಂಟು ಮಾಡಿದೆ ಎಂದರು.

ತಮ್ಮ ವಿರುದ್ಧದ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಅದರ ಕುರಿತು ಹೆಚ್ಚಿನ ಚರ್ಚೆ ಮಾಡುವುದಿಲ್ಲ. ನ್ಯಾಯಾಲಯದ ಮೇಲೆ ಸಂಪೂರ್ಣ ವಿಶ್ವಾಸವಿದ್ದು, ಮುಂದಿನ ದಿನಗಳಲ್ಲಿ ಸತ್ಯ ಹೊರ ಬರಲಿದೆ. ನ್ಯಾಯಾಲಯದ ತೀರ್ಪಿಗೆ ಗೌರವ ನೀಡುವುದು ತಮ್ಮ ಕರ್ತವ್ಯ ಎಂದರು.

ಹಿಂದಿನ ಶಾಸಕ ವೈ.ಎನ್. ರುದ್ರೇಶ್‌ಗೌಡ ಅವರನ್ನು ಸ್ಮರಿಸಿದ ಲಿಂಗೇಶ್, ಅಕ್ರಮ-ಸಕ್ರಮ ಹಾಗೂ ಬಗರ್‌ಹುಕುಂ ವಿಚಾರದಲ್ಲಿ ಯಾರ ಮೇಲೂ ಅನಗತ್ಯ ಅಪಪ್ರಚಾರ ಮಾಡಬಾರದು ಎಂದು ಹೇಳಿದರು.

ರೈತರಿಗೆ ಈಗಾಗಲೇ ಮಂಜೂರಾಗಿರುವ ಜಮೀನುಗಳನ್ನು ಮರಳಿ ಕಸಿದುಕೊಳ್ಳುವ ಪ್ರಯತ್ನ ನಡೆದರೆ ರೈತ ಮುಖಂಡರು ಹಾಗೂ ರೈತ ಸಂಘಟನೆಗಳೊಂದಿಗೆ ಒಗ್ಗೂಡಿ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.



ತಾಲೂಕಿನ ಪ್ರಮುಖ ರೈತ ಸಮಸ್ಯೆಗಳ ಕುರಿತು ಮಾತನಾಡಿದ ಅವರು, ರಣಘಟ್ಟ ಸೇರಿದಂತೆ ಹಲವು ನೀರಾವರಿ ಯೋಜನೆಗಳ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ನೆನೆಗುದಿಗೆ ಬಿದ್ದಿರುವ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಿ ರೈತರಿಗೆ ನೀರು ಒದಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗುವ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕೆ ಬಳಸಿಕೊಂಡು ಅಡಗೂರು, ದೊಡ್ಡಕೋಡಿಹಳ್ಳಿ, ಗಂಗೂರು ಸೇರಿದಂತೆ ಅಗತ್ಯವಿರುವ ಪ್ರದೇಶಗಳ ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ರೈತರ ಪರವಾಗಿ ತಾವು ಕೈಗೊಂಡಿರುವ ಕಾರ್ಯದಲ್ಲಿ ಯಾವುದೇ ತಪ್ಪು ಮಾಡಿಲ್ಲ ಎಂಬ ವಿಶ್ವಾಸವಿದೆ. ಕಾನೂನುಬದ್ಧವಾಗಿ ರೈತರಿಗೆ ಜಮೀನು ದೊರಕಿಸುವ ಕೆಲಸ ಮಾಡಿದ್ದು, ಮುಂದಿನ ದಿನಗಳಲ್ಲಿ ಸತ್ಯ ಸಾಬೀತಾಗಲಿದೆ.

> ನಾನು ಜೈಲಿನಲ್ಲಿದ್ದ ಸಂದರ್ಭದಲ್ಲಿ ಸಿಂಪತಿ ಗಿಟ್ಟಿಸಿಕೊಳ್ಳಲು ಜೈಲಿಗೆ ಹೋಗಿದ್ದಾರೆ ಎಂದು ಕೆಲವರು ಮಾತನಾಡಿದ್ದಾರೆ.
> ಜೈಲಿನ ಸ್ಥಿತಿಗತಿ, ಅಲ್ಲಿನ ನೋವು ಹಾಗೂ ಮಾನಸಿಕ ಒತ್ತಡ ಹೇಗಿರುತ್ತದೆ ಎಂಬುದು ತಿಳಿಯಬೇಕಾದರೆ ನೀವು ಒಮ್ಮೆ ಜೈಲಿಗೆ ಹೋಗಿ ಬನ್ನಿ ಸ್ವಾಮಿ. ಆಗ ಅದರ ಅನುಭವ ಅರ್ಥವಾಗುತ್ತದೆ ಎಂದು ಮಾಜಿ ಶಾಸಕ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.ನನ್ನ ವಿರೋಧಿಗಳಿಗೂ ಜೈಲುವಾಸ ಬೇಡ. ಒಮ್ಮೆ ಆ ಪರಿಸ್ಥಿತಿ ಅನುಭವಿಸಿದರೆ ಅದರ ನೋವು ಏನೆಂಬುದು ಅರ್ಥವಾಗುತ್ತದೆ ಎಂದರು.



ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಳ್ಳೂರು ಸ್ವಾಮಿಗೌ ಮಾತನಾಡಿ ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರನ್ನು ಮಾಡದ ತಪ್ಪಿಗೆ ಬಂಧಿಸಿ ಸುಮಾರು 22 ದಿನಗಳ ಕಾಲ ಜೈಲಿನಲ್ಲಿ ಇರಿಸಲಾಗಿತ್ತು ಎಂಬುದು ತಾಲೂಕಿನ ಜನರ ಸ್ವಾಭಿಮಾನಕ್ಕೆ ಧಕ್ಕೆ ತಂದಿರುವ ವಿಚಾರ ಎಂದು ಬೇಸರ ಹೊರ ಹಾಕಿದರು.

ಬಗರ್‌ಹುಕುಂ ಜಮೀನು ಮಂಜೂರು ವಿಚಾರದಲ್ಲಿ ಲಿಂಗೇಶ್ ವಿರುದ್ಧ ಆರೋಪ ಮಾಡುವ ಮೊದಲು ಸಂಬಂಧಪಟ್ಟ ಕಾಯ್ದೆ, ಸುತ್ತೋಲೆ ಹಾಗೂ ನಿಯಮಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ತಾಲೂಕಿನ 2,142 ಬಗರ್‌ಹುಕುಂ ಫಲಾನುಭವಿಗಳಿಗೂ ಈ ವಿಚಾರದ ಬಗ್ಗೆ ಮಾಹಿತಿ ನೀಡುವ ಕಾರ್ಯವನ್ನು ರೈತ ಸಂಘ ಕೈಗೊಂಡಿದೆ. ರೈತರಿಗೆ ಅನ್ಯಾಯವಾದರೆ ಕಾನೂನುಬದ್ಧ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟ ನಡೆಸಲಾಗುವುದು ಎಂದು ಬಳ್ಳೂರು ಸ್ವಾಮಿಗೌಡ ಎಚ್ಚರಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಭೋಗಮಲ್ಲೇಶ್, ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಡಿ. ದಿನೇಶ್, ತಾ.ಪಂ.ಮಾಜಿ ಅಧ್ಯಕ್ಷ ಬಲ್ಲೇನಹಳ್ಳಿ ರವಿಕುಮಾರ್, ಜೆಡಿಎಸ್ ಮುಖಂಡರಾದ, ಅದ್ದೂರಿ ಚೇತನ್ ಕುಮಾರ್, ಲೋಕೇ ಗೌಡ, ಮಹದೇವ್, ಎಸ್.ಕೆ. ನಾಗೇಶ್, ದಿಲೀಪ್, ಸಂಗಮ್, ಸಿದ್ದೇಶ್, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬಸವರಾಜು, ಮಹಿಳಾ ಅಧ್ಯಕ್ಷ ವಿಂಪು, ಎಪಿಎಂಸಿ ಮಾಜಿ ಅಧ್ಯಕ್ಷ ಸಿ ಎಚ್ ಮಹೇಶ್ ಮುಖಂಡರಾದ ಖಾದರ್, ಲೋಕೇಶ್, ಮಲ್ಲೇಗೌಡ, ಸತ್ಯನಾರಾಯಣ, ದೊಡವೀರಗೌಡ ಇದ್ದರು.

# ಎಸ್‌ಸಿ-ಎಸ್‌ಟಿ ಸಮುದಾಯಕ್ಕೆ ಡಿಸಿಸಿ ಅಧ್ಯಕ್ಷ ನೀಡಲು ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ ಐದಾರು ದಶಕಗಳಿಂದ ಹಾಸನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಕ್ಕೆ ನೀಡದಿರುವುದು ವಿಷಾದನೀಯ, ಈ ಬಾರಿಯಾದರೂ ನೀಡಬೇಕು ಎಂದು ಮಾಜಿ ಸಹ ಸಂಚಾಲಕ ರತನ್ ಒತ್ತಾಯಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಸುಮಾರು 5 ಲಕ್ಷದಷ್ಟು ಇರುವ ಪರಿಶಿಷ್ಟ ಜಾತಿ-ಪಂಗಡದವರಿದ್ದಾರೆ. ಪಕ್ಷದ ಸಂಘಟನೆ ಹಾಗೂ ಗೆಲುವಿಗೆ ನಿರಂತರವಾಗಿ ಬೆಂಬಲ ನೀಡುತ್ತಿರುವ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಈ ಬಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಇತಿಹಾಸದಲ್ಲಿ ಬಹುತೇಕ ಸಮುದಾಯದವರಿಗೆ ಡಿಸಿಸಿ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಖಂಡರಿಗೆ ಪ್ರಾತಿನಿಧ್ಯ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರಂಭದಿಂದಲೂ ಪರಿಶಿಷ್ಟರು ಪಕ್ಷಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಆದರೂ ಉದ್ದೇಶದಿಂದಲೋ, ತುಳಿಯುವ ಕಾರಣದಿಂದಲೋ ಸಮುದಾಯಕ್ಕೆ ಅವಕಾಶ ನೀಡದಿರುವುದು ಬೇಸರ ತರಿಸಿದೆ.

ಜಿಲ್ಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ನಿಭಾಯಿಸುವ ಹಲವು ನಾಯಕರಿದ್ದಾರೆ. ಈಗಾಗಲೇ ಐದಾರು ಮಂದಿ ಅರ್ಜಿ ಹಾಕಿದ್ದು, ಅವರಿಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಮೀಸಲು ಕ್ಷೇತ್ರದಲ್ಲೂ ಜಿಲ್ಲೆಯ ದಲಿತರ ಬದಲಿಗೆ ಬೇರೆ ಕ್ಷೇತ್ರದವರಿಗೆ ಮಣೆ ಹಾಕಿದ ಕಾರಣದಿಂದಲೇ 2018 ಮತ್ತು 2023ರಲ್ಲಿ ಸಕಲೇಶಪುರದಲ್ಲಿ ಪಕ್ಷ ಸೋತಿದೆ. ಮುಂದಾದರೂ ಕಾಂಗ್ರೆಸ್ ನಾಯಕರು ಎಚ್ಚೆತ್ತುಕೊಂಡು ಜಿಲ್ಲೆಯ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೂಕ್ತ ಸ್ಥಾನಮಾನ ನೀಡಬೇಕು. ಇಲ್ಲದಿದ್ದರೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಪ್ರವಾಸ ಮಾಡಿ ದಲಿತ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯ ಕುರಿತು ಜಾಗೃತಿ ಮೂಡಿಸಲಾಗುವುದು ಎಂದು ಎಚ್ಚರಿಸಿದರು. ಈ ಬಗ್ಗೆ ಸಚಿವ ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಮಾಜಿ ಸಚಿವ ಬಿ. ಶಿವರಾಂ ಸೇರಿದಂತೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಾಂಗ್ರೆಸ್ ನಾಯಕರು ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವಿಜಯ್ ಕುಮಾರ್, ಮಲ್ಲೇಶ್, ಕೃಷ್ಣಪ್ಪ ಇದ್ದರು.

# ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳದೆ ಜವಾಬ್ದಾರಿಯಿಂದ ಬಳಸಬೇಕು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿರಿಯರು ಹೋರಾಡಿ ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಳ್ಳುವ ಬದಲು, ಕೆಲಮೊಮ್ಮೆ ಅದರ ದುರುಪಯೋಗವಾಗುತ್ತಿದೆಯೇ ಎಂಬ ಆತಂಕ ಕಾಡುತ್ತಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್ ಮಲ್ಲೇಶಗೌಡ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಒಂದು ಕಡೆ ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರ ಹೆಚ್ಚಾಗುತ್ತಿದ್ದರೆ, ಮತ್ತೊಂದು ಕಡೆ ದೇಶದ ಅನೇಕ ಜನರಿಗೆ ಸ್ವಾತಂತ್ರ್ಯದ ಸಣ್ಣ ಅನುಭವವೂ ದೊರೆಯದೆ ಸಂಕಷ್ಟದ ಬದುಕು ನಡೆಸುವ ಪರಿಸ್ಥಿತಿ ಇದೆ. ಈ ಎರಡೂ ಸಂಗತಿಗಳು ನೋವುಂಟುಮಾಡುತ್ತವೆ ಎಂದರು.

ಪ್ರತಿಯೊಬ್ಬರೂ ಪರಸ್ಪರರ ಧರ್ಮ, ಜಾತಿ, ಭಾವನೆ, ಮೌಲ್ಯ ಮತ್ತು ನಂಬಿಕೆಗಳನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ದೇವರಿದ್ದಾನೆ ಎಂಬ ನಂಬಿಕೆ ಇರುವವರು ಹಾಗೂ ದೇವರಿಲ್ಲ ಎಂಬ ನಂಬಿಕೆ ಹೊಂದಿರುವವರು ಪರಸ್ಪರರ ನಂಬಿಕೆಯನ್ನು ಗೌರವಿಸಬೇಕು. ಹಾಗೆಯೇ, ತಮ್ಮ ಧರ್ಮವನ್ನು ಪ್ರೀತಿಸುವುದಕ್ಕೆ ಮತ್ತೊಂದು ಧರ್ಮವನ್ನು ದ್ವೇಷಿಸುವ ಅಗತ್ಯವಿಲ್ಲ. ತನ್ನ ಧರ್ಮವನ್ನು ಪ್ರೀತಿಸುವುದರ ಜೊತೆಗೆ ಇನ್ನೊಬ್ಬರ ಧರ್ಮವನ್ನೂ ಗೌರವಿಸುವ ಮನಸ್ಸು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹೆತ್ತ ತಾಯಿಯನ್ನು ಪ್ರೀತಿಸಲು ಸಾಧ್ಯವಾಗದವನು ಮತ್ತೊಬ್ಬರನ್ನು ಪ್ರೀತಿಸುತ್ತೇನೆ ಎನ್ನುವುದರಲ್ಲಿ ಅರ್ಥವಿಲ್ಲ. ತನ್ನ ಮನೆ, ಮಣ್ಣು ಮತ್ತು ಜನರನ್ನು ಪ್ರೀತಿಸಲು ಸಾಧ್ಯವಾಗದವನು ರಾಷ್ಟ್ರವನ್ನು ಪ್ರೀತಿಸುತ್ತೇನೆ ಎನ್ನುವುದೂ ಅರ್ಥಹೀನ. ದೇಶಭಕ್ತಿ ಎಂದರೆ ರಾಷ್ಟ್ರಕ್ಕಾಗಿ ಇತರರನ್ನು ಕೊಲ್ಲುವುದಲ್ಲ; ದೇಶಕ್ಕಾಗಿ ಬದುಕುವುದು ಎಂದರು.

ಸಾಹಿತಿ ಹುಲ್ಲೇನಹಳ್ಳಿ ರಾಜೇಶ್ವರಿ ಮಾತನಾಡಿ,ವ್ಯಕ್ತಿ ಪರಸ್ಪರರನ್ನು ಗೌರವಿಸುವುದು, ಕಾನೂನು ಪಾಲಿಸುವುದು, ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು ಹಾಗೂ ಸಮಾಜದಲ್ಲಿ ಸೌಹಾರ್ದ ಬೆಳೆಸುವುದು ಕೂಡ ದೇಶಭಕ್ತಿಯೇ. ಸ್ವಾತಂತ್ರ್ಯ ಎಂದರೆ ಕೇವಲ ಹಕ್ಕುಗಳನ್ನು ಅನುಭವಿಸುವುದಲ್ಲ; ಅದರೊಂದಿಗೆ ಜವಾಬ್ದಾರಿಯನ್ನೂ ಅರಿತು ನಡೆಯಬೇಕು ಎಂದು ಹೇಳಿದರು.

ಯುವಕರು ಪ್ರತಿಯೊಂದು ಹೆಜ್ಜೆಯನ್ನೂ ಪ್ರಜ್ಞೆ, ಜಾಗೃತಿ ಮತ್ತು ಅತ್ಯಂತ ಎಚ್ಚರಿಕೆಯಿಂದ ಇಡಬೇಕು. ಅವರು ಇಡುವ ಹೆಜ್ಜೆಗಳು ಮುಂದಿನ ಪೀಳಿಗೆ ಅನುಸರಿಸಲು ಯೋಗ್ಯವಾಗಿರಬೇಕು. ಅಂತಹ ಹೆಜ್ಜೆಗಳ ಮೂಲಕ ದೇಶವನ್ನು ಗಟ್ಟಿಗೊಳಿಸಬೇಕು ಎಂದು ಕರೆ ನೀಡಿದರು.

ಜ್ಞಾನಧಾರೆ ಪ್ಯಾರಾ ಮೆಡಿಕಲ್ ಕಾಲೇಜಿನ ಮುಖ್ಯಸ್ಥ ಮಧುಸೂದನ್ ಮಾತನಾಡಿ,ದೇಶ ಕಟ್ಟುವುದು ಎಂದರೆ ಕೇವಲ ದೊಡ್ಡ ಕಟ್ಟಡಗಳು ಅಥವಾ ಯೋಜನೆಗಳನ್ನು ನಿರ್ಮಿಸುವುದಲ್ಲ. ನಮ್ಮನ್ನು ನಾವು ಗಟ್ಟಿಯಾಗಿ ಕಟ್ಟಿಕೊಳ್ಳುವುದೇ ದೇಶ ಕಟ್ಟುವ ಮೊದಲ ಹೆಜ್ಜೆ. ನಮ್ಮಲ್ಲಿ ಪ್ರಾಮಾಣಿಕತೆ, ಮಾನವೀಯತೆ, ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆದಾಗ ದೇಶ ಮತ್ತಷ್ಟು ಬಲಿಷ್ಠವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವ ಕಾರ್ಯದರ್ಶಿ ಬಿ.ಆರ್ ಬೊಮ್ಮೇಗೌಡ, ಸಂಘಟನಾ ಕಾರ್ಯದರ್ಶಿ ಆರ್.ಬಿ ಶಂಕರ್, ಮಾಜಿ ಕೋಶಾಧ್ಯಕ್ಷ ಜಯರಾಂ, ಪದಾಧಿಕಾರಿಗಳಾದ ವನಜಾ ಸುರೇಶ್, ಬನುಮಾ ಗುರುದತ್ತ, ಸತೀಶ್ ಪಿಳ್ಳೇನಹಳ್ಳಿ, ರೋಟರಿ ಕ್ಲಬ್ ಆಫ್ ಸೆಂಟ್ರಲ್ ಅಧ್ಯಕ್ಷ ರೊ.ಪರಮೇಶ್ವರ, ಉಪನ್ಯಾಸಕ ಅಶೋಕ್, ರೋಟರಿ ಸದಸ್ಯರಾದ ವಿಜಯ ಕುಮಾರ್, ಪ್ರದೀಪ್, ಯೋಗೇಶ್ ಗೌಡ ಇತರರು ಉಪಸ್ಥಿತರಿದ್ದರು.

# ಹಾಸನ ಬರಘೋಷಣೆಗೆ ಬಿಜೆಪಿ ಒತ್ತಾಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಸಾಧ್ಯವಾಗದ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಹೇಮಾವತಿ ಜಲಾಶಯದಿಂದ ಪಕ್ಕದ ತಮಿಳುನಾಡಿಗೆ ನೀರು ಹರಿಸಿ, ಹಾಸನ, ಮಂಡ್ಯ ಹಾಗೂ ತುಮಕೂರು ಜಿಲ್ಲೆಗಳ ರೈತರಿಗೆ ಕೃಷಿಗಾಗಿ ನೀರು ನೀಡದೆ ಅನ್ಯಾಯ ಮಾಡಲಾಗುತ್ತಿದೆ ಎಂದು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಬಿ.ಹೆಚ್. ನಾರಾಯಣಗೌಡ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಮರ್ಪಕವಾಗಿ ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಭತ್ತ, ಕಬ್ಬು ಸೇರಿದಂತೆ ವಿವಿಧ ಬೆಳೆ ಬೆಳೆಯದಂತೆ ಸರ್ಕಾರದಿಂದ ಸೂಚನೆ ನೀಡಲಾಗಿದೆ.

ಹೀಗಿದ್ದರೂ ರೈತರ ಸಂಕಷ್ಟ ಪರಿಗಣಿಸದೆ ಹೇಮಾವತಿ ಜಲಾಶಯದ ನೀರನ್ನು ತಮಿಳುನಾಡಿಗೆ ಹರಿಸಲಾಗುತ್ತಿದೆ ಎಂದು ದೂರಿದರು. ತಮಿಳುನಾಡಿನಲ್ಲಿ ಈಗಾಗಲೇ ಎರಡು ಬೆಳೆಗಳನ್ನು ಬೆಳೆಯಲಾಗಿದೆ.

ಅಲ್ಲಿನ ಕೃಷಿ ಚಟುವಟಿಕೆಗಳಿಗೆ ನೀರಿನ ಬಳಕೆ ಆಗಿದೆ. ಆದರೆ ಹೇಮಾವತಿ ಜಲಾಶಯವನ್ನು ಅವಲಂಬಿಸಿರುವ ಹಾಸನ ಜಿಲ್ಲೆಯ ರೈತರಿಗೆ ತಮ್ಮ ಜಮೀನುಗಳಲ್ಲಿ ಬೆಳೆ ಬೆಳೆಯಲು ಅಗತ್ಯವಾದ ನೀರು ದೊರೆಯುತ್ತಿಲ್ಲ. ಇದು ರೈತರ ಮೇಲೆ ಮತ್ತಷ್ಟು ಆರ್ಥಿಕ ಹೊರೆ ಬೀರುವಂತಾಗಿದೆ ಎಂದು ಹೇಳಿದರು.

ಹೇಮಾವತಿ ಜಲಾಶಯದ ನೀರು ಹಾಸನ ಮಾತ್ರವಲ್ಲದೆ ಮಂಡ್ಯ ಮತ್ತು ತುಮಕೂರು ಜಿಲ್ಲೆಗಳ ರೈತರ ಕೃಷಿ ಹಾಗೂ ಹಲವು ಪ್ರದೇಶಗಳ ಕುಡಿಯುವ ನೀರಿನ ಅಗತ್ಯಕ್ಕೂ ಪ್ರಮುಖವಾಗಿದೆ. ರೈತರ ಹಿತದೃಷ್ಟಿಯಿಂದ ಜಲಾಶಯದ ನೀರಿನ ಲಭ್ಯತೆ ಹಾಗೂ ಭವಿಷ್ಯದ ಅಗತ್ಯವನ್ನು ಪರಿಗಣಿಸಿ ವೈಜ್ಞಾನಿಕವಾಗಿ ನೀರು ನಿರ್ವಹಣೆ ಮಾಡಬೇಕು.

ಸ್ಥಳೀಯ ರೈತರ ಅಗತ್ಯವನ್ನು ಕಡೆಗಣಿಸಿ ಹೊರ ರಾಜ್ಯಕ್ಕೆ ನೀರು ಹರಿಸುವ ನಿರ್ಧಾರವನ್ನು ಸರ್ಕಾರ ಮರುಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ಹೇಮಾವತಿ ಜಲಾಶಯದಿಂದ ರೈತರಿಗೆ ನೀರು ಬಿಡುಗಡೆ ಮಾಡುವಂತೆ ಬಿಜೆಪಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ಗೊರೂರು ಅಣೆಕಟ್ಟೆಯ ಮುಖ್ಯ ಎಂಜಿನಿಯರ್ ಅವರಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಜಿಲ್ಲೆಯ ರೈತರ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು, ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ನೀರನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಆರ್. ಮೋಹನ್, ನಗರಾಧ್ಯಕ್ಷ ಯೋಗೇಶ್‌ಗೌಡ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಟರಾಜು, ಉಪಾಧ್ಯಕ್ಷ ಮಹೇಶ್, ಬಿ.ವೇದಾವತಿ ಇದ್ದರು.

# ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು-ಸದಸ್ಯರ ಪ್ರವಾಸ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಸಂತೋಷ್ ಕುಮಾರ್ ಹಾಗೂ ಸದಸ್ಯರಾದ ಸತ್ಯನಾರಾಯಣಶೆಟ್ಟಿ ಅವರು ಆ.19 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಭೇಟಿ ಮತ್ತು ಚರ್ಚೆ, ಮದ್ಯಾಹ್ನ 12 ಗಂಟೆಗೆ ಹಾಸನ ಜಿಲ್ಲೆಯಲ್ಲಿರುವ ವಸತಿ ನಿಲಯ, ಅಂಗನವಾಡಿ, ಶಾಲೆ, ಆಸ್ಪತ್ರೆ, ಪೊಲೀಸ್ ಠಾಣೆ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ಮತ್ತು ಪರಿಶಿಲನೆ, ಸಂಜೆ 4 ಗಂಟೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ನಂತರ ಸಂಜೆ 6 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಮಾಡಲಿದ್ದಾರೆ.

# ಕಲೆ ಎಂದರೆ ಮನಸ್ಸಿನ ಭಾವನೆಗೆ ಬಣ್ಣ ಹಚ್ಚುವ ಸುಂದರ ಅಭಿವ್ಯಕ್ತಿ

## ಲತಾ ಎಲ್.ಜಿ. ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

**ಗೊರೂರು ಅನಂತರಾಜು, ಹಾಸನ.**

ಕಲೆ ಎಂದರೆ ಮನಸ್ಸಿನ ಭಾವನೆಗೆ ಬಣ್ಣ ಹಚ್ಚುವ ಸುಂದರ ಅಭಿವ್ಯಕ್ತಿ ಎಂಬ ಶೀರ್ಷಿಕೆಯಡಿ ಚಿತ್ರಕಲಾವಿದೆ ಲತಾ ಎಲ್.ಜಿ. ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವು ಹಾಸನದ ಸಂಸ್ಕೃತ ಭವನದಲ್ಲಿ ನೆನ್ನೆ ಭಾನುವಾರ ಯಶಸ್ವಿಯಾಗಿ ನಡೆಯಿತು. ಲತಾ ಎಲ್.ಜಿ ಪ್ರಸ್ತುತ ಶಾಂತಲಾ ಚಿತ್ರಕಲಾ ವಿದ್ಯಾಲಯದ ಶಿಕ್ಷಕಿ. ಈಗಾಗಲೇ ಹಲವು ಗ್ರೂಪ್ ಶೋಗಳಲ್ಲಿ ಭಾಗಿಯಾಗಿರುವ ಇವರು ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಚಿತ್ರಕಲೆ ಬಗ್ಗೆ ಆಸಕ್ತಿ ಮೂಡಿಸಲು ಹಲವು ಬಾರಿ ಸ್ಪರ್ಧೆ ನಡೆಸಿ ಚಂದವಾಗಿ ಬರೆದ ಮಕ್ಕಳಿಗೆ ಅಂದದ ಬಹುಮಾನ ನೀಡಿದ್ದಾರೆ. ಈ ಬಾರಿಯೂ ಬೆಳಿಗ್ಗೆ 1 ರಿಂದ 10ನೇ ತರಗತಿ ಮಕ್ಕಳಿಗೆ ಒಂದೊಂದು ತರಗತಿಯ ಮಕ್ಕಳಿಗೂ ಒಂದೊಂದು ವಿಷಯ ಕೊಟ್ಟು ಚಿತ್ರ ಬರೆಸಿ ಗೆದ್ದ ಮಕ್ಕಳಿಗೆ ನಮ್ಮಿಂದ ಬಹುಮಾನ ಕೊಡಿಸಿ, ಪ್ರದರ್ಶನಕ್ಕೆ ಇರಿಸಿದ್ದ ತಮ್ಮ ಕಲಾಕೃತಿಗಳನ್ನು ತೋರಿಸಿ ವರ್ಣಿಸಿದರು.

ಇವರು ಪ್ರದರ್ಶನಕ್ಕೆ ಇರಿಸಿದ್ದ ಕಲಾಕೃತಿಗಳು ಒಂದು ಬುದ್ಧ ಸೀರೀಸ್ ಚಿತ್ರಗಳಾದರೆ ಮತ್ತೊಂದು ಹೆಣ್ಣಿನ ಮನೋಭಾವನೆಗಳ ಚಿಂತನೆಗೆ ಹಚ್ಚುವ ಕಲಾಕೃತಿಗಳು. ಜೊತೆಗೆ ಕೆಲವು ಕ್ರಾಫ್ಟ್ ವರ್ಕ್ಸ್‌ಗಳು. ಕಲಾಕೃತಿ ವೀಕ್ಷಿಸುತ್ತಾ ಊರು ಯಾವುದು ಕೇಳಿದೆ.

ಸಾರ್, ನಮ್ಮೂರು ಹಾಸನ ತಾ. ಕಟ್ಟಾಯ ಹೋ. ಕಿತ್ತಾನೆ ಅಂಚೆ ಲಕ್ಕನಾಯಕನಹಳ್ಳಿ ಎಂದರು. ತಂದೆ ಗುರುವೇಗೌಡ, ತಾಯಿ ಕಮಲ. ಚಿತ್ರಕಲೆ ಯಲ್ಲಿ ಇವರು ಅರಳಿದ ಕಮಲ. ತಮ್ಮ ವ್ಯಾಸಂಗಕ್ಕೆ ಚಿತ್ರಕಲೆಯನ್ನೇ ಆರಿಸಿಕೊಂಡು ಡಿಪ್ಲೋಮ ನಂತರ 5 ವರ್ಷ ಚಿತ್ರಕಲೆ ಶಿಕ್ಷಕರ ತರಬೇತಿಯನ್ನು ಹಾಸನದ 32 ವರ್ಷ ಹಳೆಯದಾದ ಶಾಂತಲಾ ಚಿತ್ರಕಲಾ ಕಾಲೇಜಿನಲ್ಲಿ ಕಲಿತು ಈಗ ಅಲ್ಲಿಯೇ ಶಿಕ್ಷಕಿಯಾಗಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ.

ತಮ್ಮ ವ್ಯಾಸಂಗ ಅವಧಿ 1998-2004ವರೆಗೆ ಪ್ರತಿ ವರ್ಷ ಹಾಸನದಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದು 2000-2004 ರಲ್ಲಿ ಪ್ರತಿ ವರ್ಷ ಮೈಸೂರು ದಸರಾದಲ್ಲಿ ಭಾಗವಹಿಸಿದ್ದಾರೆ. 2003 ಹಾಗೂ 2004ರಲ್ಲಿ ಹಾಸನದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ ಭಾಗಿಯಾಗಿದ್ದಾರೆ. 2001-2003 ಶಾಂತಿವನ ಟ್ರಸ್ಟ್, ಧರ್ಮಸ್ಥಳ ಇವರ ಚಿತ್ರಕಲಾ ಸ್ಪರ್ಧೆಯಲ್ಲಿ 3 ವರ್ಷ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ 7ನೇ ಕಲಾಮೇಳದಲ್ಲಿ ಸ್ಪರ್ಧಿಸಿದ್ದರು. 2005-2017 ನಿರಂತರ ಬೆಂಗಳೂರಿನ ಚಿತ್ರಸಂತೆಯಲ್ಲಿ ತಮ್ಮ ಕಲಾಕೃತಿ ಪ್ರದರ್ಶಿಸಿದ್ದಾರೆ.

ಸದ್ಯ ಇವರ ಪ್ರದರ್ಶಿತ ಕಲಾಕೃತಿಗಳಲ್ಲಿ ಬುದ್ಧ ಸೀರೀಸ್ ಕಲಾಕೃತಿಗಳು ತಪಸ್ವಿ ಭಾವದಲ್ಲಿ ಪಡಿಮೂಡಿವೆ. ಬುದ್ಧ ಎಂದರೆ ಶಾಂತಿ ಎಂಬರ್ಥ ಸೂಚಿಸಿವೆ. ತಮ್ಮ ಕಲಾಕೃತಿಗಳಲ್ಲಿ ತುಂಬಾ ನೈಜವಾಗಿ ಬಣ್ಣ ಹಾಕುವ ಇವರು ಬುದ್ಧನ ಸರಳತೆ ಮುಗ್ಧತೆ ಸೌಮ್ಯ ಸ್ವಭಾವ ಇಷ್ಟಪಟ್ಟು ಬುದ್ಧನ ಕಲಾಕೃತಿ ರಚಿಸುವಲ್ಲಿ ಸಿದ್ಧಹಸ್ತರು. ಶಾಂತಿ ಸಂಕೇತದ ಪಾರಿವಾಳ ಕಮಲದ ಹೂವು ಕೂಡ ಸಾಂಕೇತಿಸಿವೆ. ಆಫ್ರಿಕನ್ ಮಹಿಳೆಯರ ಟ್ರೆಡಿಷನಲ್ ಪೇಂಟಿಂಗ್ ಕಲಾತ್ಮಕವಾಗಿವೆ. ಪಕ್ಷಿಗಳ ಚಿತ್ರಗಳು ಮಕ್ಕಳನ್ನು ಆಕರ್ಷಿಸುತ್ತವೆ.

ನೀಲಿ ಕೆಂಪು ಹಳದಿ ಬಣ್ಣಗಳ ಜೊತೆ ತಮ್ಮದೇ ಆದಂತಹ ವಿಶೇಷ ರೀತಿಯ ಆಕ್ರಲಿಕ್ ಬಣ್ಣಗಳಿಂದ ಕ್ಯಾನ್ವಾಸ್ ಪೂರ್ಣಗೊಂಡಿವೆ. ಸ್ತ್ರೀ ಚಿಂತನೆಯ ಚಿತ್ರಗಳು ಶಾಂತಚಿತ್ತದ ಲತಾ ಮೇಡಂ ಅವರ ಒಳತೋಟಿಯ ಭಾವನೆಗಳನ್ನು ಪ್ರತಿಬಿಂಬಿಸಿವೆ.



Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248